ಗಿಲಾವು ಮಾಡಿ, ನೆಲಕ್ಕೆ ಕಲ್ಲುಚಪ್ಪಡಿ ಹಾಕಿಸಿ, ಹೆಂಚಿನ ಮೇಲ್ಛಾವಣಿ ಮಾಡಿಸಿ, ಎಂಟತ್ತು ಸಾವಿರ ಖರ್ಚು ಮಾಡಿದರು. ಸ್ಕೀಮಿನಲ್ಲಿ ಕೊಟ್ಟಿಗೆ ನಿರ್ಮಾಣಕ್ಕೆಂದು ಮೀಸಲಿರಿಸಿದ ದುಡ್ಡನ್ನು ಡಾಕ್ಟ್ರಿಂದ ಪಡೆದಾಗ ಚಿಕ್ಕಮ್ಮನ ಜೊತೆ ಲೋಲ್ಲಿಂಗ ಇದ್ದ. ಹದಿಮೂರು ಸಾವಿರದ ಬದಲು ಹತ್ತು ಸಾವಿರ ಮಾತ್ರ ಚಿಕ್ಕಮ್ಮನ ಕೈಸೇರಿತು.

ಕೊನೆಗೊಮ್ಮೆ ಹಸು ತರಲು ಎಂಟು ರೈತರು ಜೊತೆಯಾಗಿ ಮೈಸೂರು ಕಡೆ ಹೊರಟರು. ಅವರ ಜೊತೆ ಬ್ಯಾಂಕ್ ಸಿಬ್ಬಂದಿ ಮತ್ತು ಡಾಕ್ಟ್ರು ಇದ್ದರು. ಸ್ಕೀಮಿನ ಪ್ರಕಾರ ಎಲ್ಲರಿಗೆ ಒಂದೊಂದು ಹಸು ಕೊಡಿಸಬೇಕಿತ್ತು. ಆರು ತಿಂಗಳ ಅನಂತರ ಎರಡನೆಯ ಹಸು ಖರೀದಿಸಬೇಕಿತ್ತು.

ಹಸು ಖರೀದಿಸಲು ಚಿಕ್ಕಮ್ಮ ಮತ್ತು ಲೋಕಿ ಇಬ್ಬರೂ ಹೋಗಿದ್ದರು. ಇವರು ಹಸು ಖರೀದಿಸಲು ಹೋದ ಹಳ್ಳಿಯು ಬರೀ ದಲ್ಲಾಳಿಗಳಿಂದ ತುಂಬಿ ಹೋಗಿತ್ತು. ಅದು ಹಳ್ಳಿಯಾದರೂ ಪಟ್ಟಣದ ಎಲ್ಲ ಚಹರೆಗಳನ್ನು ಪಡೆದಿತ್ತು. ಹಲವಾರು ಸಣ್ಣ ದೊಡ್ಡ ಹೋಟೆಲುಗಳು, ಲಾಡ್ಜುಗಳು, ಬಾರ್ ಅಂಡ್ ರೆಸ್ಟೋರೆಂಟ್‌ಗಳು, ಒಂದರಿಂದ ಹಿಡಿದು ಹತ್ತಾರು ಹಸುಗಳನ್ನು ಸಾಗಣೆ ಮಾಡಲು ಬೇಕಾದಂತಹ ವಿಧ ವಿಧವಾದ ವಾಹನಗಳು, ಗ್ಯಾರೇಜು, ಪೆಟ್ರೋಲ್ ಬಂಕು, ಹಲವಾರು ಭಾಷೆಯ ಬೋರ್ಡುಗಳು, ಹತ್ತಾರು ಬ್ಯಾಂಕುಗಳು, ಎಟಿಎಂಗಳು ಇದ್ದವು. ಇವೆಲ್ಲಕ್ಕಿಂತ ವಿಶೇಷವಾಗಿ ರಸ್ತೆಗಳಲ್ಲಿ, ಚರಂಡಿ, ತಿಪ್ಪೆಗುಂಡಿ, ಬೀಳು ಬಿಟ್ಟ ಹೊಲ ತೋಟಗಳಲ್ಲಿ, ರಸ್ತೆಯ ಇಕ್ಕೆಲಗಳಲ್ಲಿ ಕಣ್ಣಿಗೆ ಕಾಣುವಷ್ಟು ದೂರಕ್ಕೂ ಕೊನೆಯಿಲ್ಲದಂತೆ ಪ್ಲಾಸ್ಟಿಕ್ಕಿನ ಕವರುಗಳು, ಶೀಟುಗಳು, ಗುಟ್ಕ ಚೀಟಿಗಳು, ಬ್ರೆಡ್ಡು ಬನ್ನು ಕವರುಗಳು, ಖಾಲಿ ಪ್ಲಾಸ್ಟಿಕ್ ಬಾಟಲುಗಳು ರಾಶಿ ರಾಶಿಯಾಗಿ ಬಿದ್ದಿದ್ದವು. ಅಲ್ಲಿ ಕರ್ನಾಟಕ, ತಮಿಳುನಾಡು, ಕೇರಳ ಮುಂತಾದ ರಾಜ್ಯಗಳ ವಿವಿಧ ಭಾಗಗಳಿಂದ ಹಸು ಖರೀದಿಸಲು ರೈತರು ಬಂದಿದ್ದರು. ಬ್ಯಾಂಕ್ ಸಿಬ್ಬಂದಿ ಮತ್ತು ದನದ ಡಾಕ್ಟ್ರುಗಳಿಗೆ ದಲ್ಲಾಳಿಗಳು ಮುಗಿಬೀಳುತ್ತಿದ್ದರು. ಅವರೆಲ್ಲ ಬಹಳ ವರ್ಷಗಳಿಂದ ಪರಸ್ಪರ ಬಲ್ಲವರಾಗಿದ್ದರು. ದಲ್ಲಾಳಿಗಳು ಅಧಿಕಾರಿಗಳಿಗೆ ಹಣ್ಣು, ಬಿಸ್ಕತ್ತು, ಕೋಕೋಕೋಲಾ, ಪೆಪ್ಸಿ, ಸಿಗರೇಟು ತರಿಸುವುದು, ಛತ್ರಿ ಹಿಡಿದು ನೆರಳು ಮಾಡುವುದು, ಪಕ್ಕಕ್ಕೆ ಕರೆದುಕೊಂಡು ಹೋಗಿ ಕಿವಿಮಾತು ಹೇಳುವುದು ನಡೆದೇ ಇತ್ತು. ಹಸು ಮಾರಾಟಗಾರರೂ ಸಹ ದಲ್ಲಾಳಿಗಳನ್ನು ಅವಲಂಬಿಸಿದ್ದರು. ಇಡೀ ಹಳ್ಳಿಯೇ ದಲ್ಲಾಳಿಗಳ ಸಂತೆಯಾಗಿತ್ತು. ಅಲ್ಲಿ ಎಲ್ಲರ ನಡೆ ನುಡಿಗಳು ಸುಳ್ಳಿನ ಮೇಲೆ ನಿಂತಿದ್ದವು. ಅದು ಎಲ್ಲರಿಗೂ ಗೊತ್ತಿತ್ತು. ಆದ್ದರಿಂದ, ಅವರು ಒಬ್ಬರನ್ನೊಬ್ಬರು ನಂಬುತ್ತಿರಲಿಲ್ಲ. ಆದರೂ ವ್ಯವಹಾರ ಸರಾಗವಾಗಿ ನಡೆಯುತ್ತಿತ್ತು.

ಚಿಕ್ಕಮ್ಮನಿಗೆ ಡಾಕ್ಟ್ರು, ಬ್ಯಾಂಕ್ ಸಿಬ್ಬಂದಿ ಅಥವಾ ದಲ್ಲಾಳಿಗಳ ಮಧ್ಯೆ ವ್ಯತ್ಯಾಸವೇ ಕಾಣದಂತಾಯಿತು. ಅವರು ತನ್ನ ದುಡ್ಡನ್ನು ಹರಿದುಕೊಂಡು ತಿನ್ನುವ ಬೇರೆ ಬೇರೆ ಪಾತ್ರಧಾರಿಗಳಷ್ಟೇ ಆಗಿದ್ದು, ತಮ್ಮ ಸರದಿಗೆ ಕಾಯುತ್ತಿದ್ದಾರೆ ಎನಿಸಿತು. ಅಲ್ಲಿದ್ದ ಹಸುಗಳಲ್ಲಿ ಚೆನ್ನಾಗಿದ್ದ ಎಚ್‌ಎಫ್ ಮಿಶ್ರತಳಿಯ ಹಸುವನ್ನು ಕೊಳ್ಳಲು ಒಪ್ಪಿದಳು. ಚಿಕ್ಕಮ್ಮ ಒಪ್ಪಿದ ಹಸು ಹದಿನೈದು ದಿನದ ಕೆಳಗೆ ಗಂಡುಕರು ಹಾಕಿತ್ತೆಂದು ದಲ್ಲಾಳಿ ತಿಳಿಸಿದ. ಮಿಶ್ರತಳಿ ಹಸುಗಳು ಗಂಡು ಕರು ಹಾಕಿದರೆ ಕರುಗಳು ನಿಷ್ಪ್ರಯೋಜಕವೆಂದು ರೈತರು ಮಾರಿಬಿಡುತ್ತಿದ್ದರು. ಅವು ಕಟುಕರ ಪಾಲಾಗುತ್ತಿದ್ದವು. ಇಲ್ಲೂ ಹಾಗೇ ಆಗಿತ್ತು ಎಂದು ದಲ್ಲಾಳಿ ಹೇಳಿದ. ಯಾರಿಗೆ ಗೊತ್ತು ಕರು ಹಾಕಿ ತಿಂಗಳಾಗಿತ್ತೋ? ಮೂರು ತಿಂಗಳಾಗಿತ್ತೋ? ಹಾಕಿದ ಕರು ಗಂಡೋ ಹೆಣ್ಣೋ? ಕಂಡೋರು ಯಾರು?

ಚಿಕ್ಕಮ್ಮ, ಲೋಕಿ ಅಲ್ಲೇ ಉಳಿದು ಎರಡು ಹೊತ್ತು ಹಾಲು ಹಿಂಡಿಸಿ ನೋಡಿದರು. ಹಸು ದಿನವೊಂದಕ್ಕೆ ಇಪ್ಪತ್ತು ಲೀಟರ್ ಹಾಲು ಕೊಡುತ್ತಿದ್ದುದರಿಂದ ಐವತ್ತು ಸಾವಿರ ರೂಪಾಯಿಗೆ ಕಡಿಮೆಯಿಲ್ಲ ಎಂದು ದಲ್ಲಾಳಿ ಹಿಡಿದ ಪಟ್ಟು ಬಿಡಲಿಲ್ಲ. ಬೇರೆ ಸಂದರ್ಭದಲ್ಲಾಗಿದ್ದರೆ ಕಡಿಮೆ